# ಭಾರತೀಯ ಶಾಸನಗಳ ವಿಷಯಗಳು ಮತ್ತು ಅವುಗಳ ಚಾರಿತ್ರಿಕ ಮಹತ್ವಕ್ಕೆ ಕಾರಣಗಳು

**ಪವಿತ್ರ ಎ.ವಿ.**

**ಅತಿಥಿ ಉಪನ್ಯಾಸಕರು**

**ಶ್ರೀಮತಿ ಇಂದಿರಾಗಾಂಧಿ ಮಹಿಳಾ ಕಾಲೇಜು ಸಾಗರ**

**ಪೀಠಿಕೆ**

ಶಾಸನ ಶಾಸ್ತ್ರವು ಭಾರತೀಯ ಇತಿಹಾಸ ಸಂಶೋಧನೆಯಲ್ಲಿ ಪ್ರಮುಖವಾಗಿದೆ. ವಿಶೇಷಾಗಿ ಭರತಖಂಡ ಶಾಸನ ರೂಪದ ಅವಶೇಷಗಳಲ್ಲಿ ಶ್ರೀಮಂತವಾಗಿರುವುದು ಮಾತ್ರವಲ್ಲದೇ ಶಾಸನಗಳು ಭಾರತದ ಇತಿಹಾಸಕ್ಕೆ ಸಂಬಂಧಪಟ್ಟಂತೆ ಎಲ್ಲಾ ಸಂಶೋಧನಾ ಪಥಗಳಲ್ಲೂ ಐತಿಹಾಸಿಕ ಫಲಿತಾಂಶಗಳಿಗೆ ಖಚಿತವಾದ ಏಕಮಾತ್ರ ಬುನಾದಿಯಾಗಿದೆ. ಭಾರತದಲ್ಲಿ ಸುಮಾರು 75 ಸಾವಿರಕ್ಕೂ ಹೆಚ್ಚು ಶಾಸನಗಳು ದೊರೆತಿವೆ. ಈಶಾಸನಗಳು ಸಂಸ್ಕೃತ, ಪಾಳಿ, ಪಾಕೃತ, ತಮಿಳು, ತೆಲುಗು, ಕನ್ನಡ ಮುಂತಾದ ಭಾಷೆಗಳಲ್ಲಿ ರಚಿತವಾಗಿವೆ. ಹಾಗೂ ಬ್ರಾಹ್ಮಿ ಕರೋಷ್ಠಿ ಲಿಪಿಗಳನ್ನು ಬಳಸಲಾಗಿದೆ. ಭಾರತದಲ್ಲಿ ಬಹುಪಾಲು ಶಾಸನಗಳು ಬಂಡೆಗಳ ಮೇಲೆ, ಕಲ್ಲು ಸ್ಥಂಭಗಳ ಮೇಲೆ, ಕಬ್ಬಿಣದ ಸ್ಥಂಭಗಳ ಮೇಲೆ, ಗುಹಾಲಯಗಳಲ್ಲಿ, ತಾಮ್ರ ಮತ್ತು ಕಂಚಿನ ಪಟಗಳ ಮೇಲೆ ಮತ್ತು ಸುಟ್ಟ ಮಣ್ಣಿನ ಮುದ್ರೆಗಳು ಮುಂತಾದ ಚಿರಸ್ಥಾಯಿ ವಸ್ತುಗಳ ಮೇಲೆ ಕೊರೆಯಲ್ಪಟ್ಟಿವೆ. ಪ್ರಾಚೀನ ಭಾರತದ ಶಾಸನಗಳು ಒಳಗೊಂಡಿರುವ ವಿಷಯಗಳ ಆಧಾರದ ಮೇಲೆ ಅವುಗಳನ್ನು ಐತಿಹಾಸಿಕ, ಧಾರ್ಮಿಕ, ದಾನಸಂಬಂಧಿ ಅಥವಾ ದತ್ತಿಶಾಸನಗಳು, ಸ್ಮರಣಾರ್ಥ ಶಾಸನಗಳೆಂದು ವಿಭಾಗೀಸಲಾಗಿದೆ. ಶಾಸನಗಳು ರಾಜಮಹಾರಾಜರ, ಆಡಳಿತಾಧಿಕಾರಿಗಳ, ಜನಸಾಮಾನ್ಯರ ರಾಜಕೀಯ, ಧಾರ್ಮಿಕ, ಸಾಮಾಜಿಕ, ಕಲೆ, ಸಾಹಿತ್ಯ ಮುಂತಾದವುಗಳನ್ನು ನೀಡುತ್ತದೆ. ನನ್ನ ಈ ಬರಹದಲ್ಲಿ ಮುಖ್ಯವಾಗಿ ಭಾರತೀಯ ಶಾಸನಗಳ ವಿಷಯಗಳು ಮತ್ತು ಅವುಗಳ ಚಾರಿತ್ರಿಕ ಮಹತ್ವಕ್ಕೆ ಒತ್ತುಕೊಡಲಾಗಿದೆ.

**ಶಾಸನಗಳ ಮೌಲ್ಯ**

ಇತಿಹಾಸಕ್ಕೆ ಸಂಬಂಧಿಸಿದಂತೆ ಪ್ರಾಚೀನ ಭಾರತೀಯರು ನಮಗೆ ಬಿಟ್ಟುಹೋಗಿರುವ ಅಮೂಲ್ಯ ಆಸ್ತಿ ಎಂದರೆ ಶಾಸನಗಳಾಗಿವೆ. ಭಾರತದ ರಾಜಕೀಯ ಧಾರ್ಮಿಕ, ಸಮಾಜಿಕ ಮತ್ತು

ಆರ್ಥಿಕ ಚರಿತ್ರೆಯ ಬಗೆಗಿರುವ ನಮ್ಮ ಪರಿಜ್ಞಾನ ನಿಷ್ಪನ್ನವಾಗಿರಬೇಕಾದರೆ ಶಾಸನಗಳ ಒಂದು ಸಹನಾ ಪೂರ್ಣ ಪರೀಕ್ಷೆಯಿಂದಲೇ. ಭಾರತೀಯ ಇತಿಹಾಸ ಸಂಶೋಧನೆಯು ಎಲ್ಲಾ ಮಾರ್ಗಗಳಲ್ಲೂ ಕಡೆಗೆ ಶಾಸನಗಳನ್ನೇ ಅವಲಂಬಿಸಿದೆ. ಅವುಗಳ ಆಧಾರವಿಲ್ಲದೇ ಯಾವುದೇ ಖಚಿತ ಕಾಲವನ್ನಾಗಲಿ, ಗುರುತಿಸುವಿಕೆಯನ್ನಾಗಲಿ, ದೃಢಗೊಳಿಸುವುದು ಶಖ್ಯವಿಲ್ಲ. ನಾವು ಪರಂಪರೆ, ಸಾಹಿತ್ಯ, ನಾಣ್ಯ, ಕಲೆ, ಶಿಲ್ಪ ಅಥವಾ ಮತ್ತಾವುದೇ ಮೂಲದಿಂದ ಕಲಿಯಬಹುದಾದ ಎಲ್ಲವನ್ನು ಅವು ಕ್ರಮಬದ್ಧಗೊಳಿಸುತ್ತವೆ. ಶಾಸನಗಳ ಸಾಮಾನ್ಯ ಮೌಲ್ಯವಿರತಕ್ಕದ್ದು, ಬಹುಮಟ್ಟಿಗೆ ಅವೆಲ್ಲವೂ ಪರಸ್ಪರ ಕೂಡಿ ಕೆಲಸ ಮಾಡುವ ರೀತಿಯಲ್ಲಿ. ಕಾರಣದ ನಮ್ಮ ಇತಿಹಾಸ ಸಂಶೋಧನೆಯ ಫಲಿತಾಂಶಗಳು ಅಘಾದ ಸಂಖ್ಯೆಯ ಶಾಸನಗಳ ದಾಖಲೆಗಳ ಪರಿಶೀಲನೆಯಿಂದ ಮತ್ತು ಸಂಶೋಧನೆಯಿಂದ ಮಾತ್ರ ಲಭ್ಯವಾಗುತ್ತವೆ. ಇತಿಹಾಸದ ಯಾವುದೇ ವಿಷಯವನ್ನು ಒಂದು ಶಾಸನ ಸ್ವಯಂ ಪೂರ್ಣವಾಗಿ ನಿರ್ಧರಿಸುವುದಿಲ್ಲ. ಆದರೆ ಅದೇ ವಿಷಯದ ಪರಿಪೂರ್ಣ ಜ್ಞಾನ ಲಭ್ಯವಾಗಬೇಕಾದರೆ ನಾವು ಸಮಕಾಲೀನ ಶಾಸನಗಳ ಮೊರೆ ಹೋಗಬೇಕಾಗುತ್ತದೆ. ಒಟ್ಟಾರೆಯಾಗಿ ಹೇಳಬೇಕೆಂದರೆ ಮುಖ್ಯ ಪ್ರಾಚೀನ ಭಾರತದ ಇತಿಹಾಸ ರಚನೆಯಲ್ಲಿ ಶಾಸನಗಳು ಅತ್ಯಂತ ಮೌಲ್ಯಭರಿತ ಆಧಾರಗಳನ್ನು ಒದಗಿಸಿಕೊಡುವಲ್ಲಿ ಉಪಯೋಗ ಕಾರಿಯಾಗಿವೆ ಎಂದು ಹೇಳಬಹುದು.

**ಶಾಸನಗಳ ವಿಷಯಗಳು**

1. **ಘಟನೆಗಳ ಸರಳ ನಿರೂಪಣೆ** : ಶಾಸನಗಳ ವಿಷಯದಲ್ಲಿ ಘಟನೆಗಳ ಬಗ್ಗೆ ಸರಳ ನಿರೂಪಣೆ ನೀಡುವ ಶಾಸನಗಳನ್ನು ತೆಗೆದುಕೊಳ್ಳಬಹುದು. ಶುದ್ಧ, ಚಾರಿತ್ರಿಕ ನಿರೂಪಣೆಯ ವಿಷಯಗಳನ್ನು ಒದಗಿಸುವಲ್ಲಿ ಅತ್ಯಂತ ಪ್ರಮುಖ ಶಾಸನೆಗಳೆಂದರೆ **ಹಾಥಿಗುಂಪಾ ಶಾಸನ,** ಇದು ಕಳಿಂಗನ ಖಾರವೇಲನ ಜೀವನವನ್ನು ಅವನ ಆಳ್ವಿಕೆಯ 13ನೇ ವರ್ಷದ ವರೆಗೆ ಸಂಗ್ರಹಿಸುತ್ತದೆ. ಹಾಗೆಯೇ ಸಮುದ್ರ ಗುಪ್ತನ **ಅಲಹಾಬಾದ್ ಸ್ಥಂಭಶಾಸನ**ವು ಆತನ ವಂಶಾವಳಿಯನ್ನು ಮತ್ತು ಉತ್ತರ ಭಾರತದ ವಿಜಯವನ್ನು ಹಾಗೂ ಆತನ ವಿದೇಶಿ ಸಂಬಂಧಗಳ ಬಗ್ಗೆ ಅಲ್ಲದೇ ಅಂದಿನ ದಕ್ಷಿಣ ಭಾರತದ ರಾಜಕೀಯ ವಿಭಾಗಗಳ ಒಳನೋಟವನ್ನು ತಕ್ಕಮಟ್ಟಿಗೆ ವಿವರಿಸುತ್ತದೆ.

ಸಾರ್ವಜನಿಕ ವಿಷಯಗಳ ಕುರಿತು ತಿಳಿಸುವ ಶಾಸನಗಳಲ್ಲಿ ಮುಖ್ಯವಾಗಿ **ಜುನಾಗಢದ** ಎರಡು ಸೊಸಗಾದ ಪ್ರಸ್ತರ ಶಾಸನಗಳು ಮುಖ್ಯವಾಗಿವೆ. ಈ ಶಾಸನಗಳಲ್ಲಿ ರುದ್ರದಾಮನ ಕಾಲದಲ್ಲಿ ಮತ್ತು ಪುನಃ ಸ್ಕಂಧ ಗುಪ್ತನ ಕಾಲದಲ್ಲಿ ನಡೆದ ಸುದರ್ಶನ ಮಹಾಸರೋವರದ ಏರಿಯಾ ದುರಸ್ತಿಯನ್ನು ಹೇಳುತ್ತದೆ. **ತಾಳಗುಂದಾ** ಶಾಸನದಲ್ಲಿ ಒಂದು ಕೆರೆಯ ನಿರ್ಮಾಣ ದಾಖಲು ಮಾಡಲಾಗಿದ್ದು ಅದರಲ್ಲಿ ಕದಂಬ ವಂಶದ ಮೂಲ ಮತ್ತು ಅಭ್ಯುದಯದ ಕುರಿತು ತಿಳಿದು ಬರುತ್ತದೆ. ಇದೇ ವರ್ಗಕ್ಕೆ ಸೇರುವ ಇನ್ನೂ ಕೆಲವು ಶಾಸನಗಳನ್ನು ತೆಗೆದುಕೊಂಡರೆ **ಸೋಹ್‌ಗೌರಾಪಟ** ದಾಖಲೆಯು ವಾಹನ ಸಂಚಾರವುಳ್ಳ ಮೂರು ಹೆದ್ದಾರಿಗಳು ಕೂಡುವಲ್ಲಿ ಎರಡು ಉಗ್ರಾಣಗಳನ್ನು ಆದಾರಿಗಳಲ್ಲಿ ಹೋಗುವವರ ತುರ್ತು ಅಗತ್ಯಗಳಿಗೋಸ್ಕರ ಸ್ಥಾಪಿಸಿರುವುದು ತಿಳಿದು ಬರುತ್ತದೆ. **ಕೀಚ್‌ಮುತ್ತುಗೂರಿನ** ಮತ್ತೊಂದು ಶಿಲಾಶಾಸನ ಸ್ಥಳಿಯ ವೀರನೊಬ್ಬ ಹುಲಿಯನ್ನು ಕೊಂದ ಏರಿಯಾ ಮೇಲಿನ ಜಾಗವನ್ನದು ಗುರುತಿಸುತ್ತದೆ.

2. **ಧಾರ್ಮಿಕ ವಿಷಯಗಳ ಶಾಸನಗಳು :** ಧಾರ್ಮಿಕ ವಿಷಯಗಳ ಶಾಸನಗಳು ಬಹುಪಾಲು ಈಗಲೂ ಉಳಿದುಬಂದಿರುವುದಕ್ಕೆ ಕಾರಣ ಹಿಂದೂಗಳ ಯಾವುದೇ ಐತಿಹಾಸಿಕ ಪ್ರವೃತ್ತಿಯಲ್ಲ, ಅವರ ಸ್ವಭಾವದ ಧಾರ್ಮಿಕ ಮತ್ತು ಪಾರ್ಶ್ವ ಮತ್ತು ಸಾಧ್ಯವಾದ ಪ್ರತಿಯೊಂದು ಸಂದರ್ಭದಲ್ಲೂ ದಾನಗಳನ್ನು ಕೊಡಬೇಕೆಂಬ ಅವರ ಆಶೆಯಿಂದ. ಈ ವರ್ಗದ ಶಾಸನಗಳು ಉತ್ತರದಲ್ಲಿ ಪೇಶಾವರ ಜಿಲ್ಲೆಯ ಯೂಸಫ್ ಜೈ ಪ್ರದೇಶದ ಷಾಹ್‌ಬಾಸು ಗಡಿಯಿಂದ ಹಿಡಿದು ದಕ್ಷಿಣದಲ್ಲಿ ಮೈಸೂರಿನ ಸಿದ್ದಾಪುರದ ತನಕ ಹಾಗೂ ಪೂರ್ವದಲ್ಲಿ ಕಟಕ್ ಜಿಲ್ಲೆಯ ಧೌಲಿಯಿಂದ ಹಿಡಿದು ಪಶ್ಚಿಮ ಕಾಥೆವಾಡದ ಗಿರ್ನಾರ್ (ಜುನಾಗಢ್)ವರೆಗೆ ಕಂಡುಬರುತ್ತವೆ. ಅಶೋಕನು ಭೌದ್ದ ಧರ್ಮಕ್ಕೆ ಪರಿವರ್ತಿತನಾಗಿ ಭೌದ್ದ ಧರ್ಮದ ಪ್ರಚಾರಕ್ಕಾಗಿ ಆತನು ಕೆತ್ತಿಸಿದ ಧಾರ್ಮಿಕ ಶಾಸನಗಳು ಮುಖ್ಯವಾಗಿವೆ. ಅಶೋಕನ **ರುಮ್ಮಿಂದೈ** ಸ್ಥಂಭ ಶಾಸನದಲ್ಲಿ ಬುದ್ದನ ಜನ್ಮ ಸ್ಥಾನವಾದ ಲುಂಬಿನಿ ವನವನ್ನು ಗುರುತಿಸುತ್ತದೆ. ಅಲ್ಲದೇ ಈ ಶಾಸನದಲ್ಲಿ ಶಾಕ್ಯ ಮುನಿ ಬುದ್ದ ಅಲ್ಲಿ ಹುಟ್ಟಿದ್ದರಿಂದ ಅಶೋಕನು ಆ ತಾಣದ ಸುತ್ತ ಕಲ್ಲಿನ ಪ್ರಾಕಾರವನ್ನು ಮರೆಗೋಡೆಯಾಗಿ ಕಟ್ಟಿಸಿ ಒಂದು ಶಿಲಾಸ್ಥಂಭವನ್ನು ಸ್ಥಾಪಿಸಿ ಲುಮ್ಮಿನಿ ಗ್ರಾಮವನ್ನು ಕೆಲವು ತೆರಿಗೆಗಳಿಂದ ಮುಕ್ತಗೊಳಿಸಿದನೆಂದು ಈ ಶಾಸನದಿಂದ ತಿಳಿದು ಬರುತ್ತದೆ.

**ಕಿತ್ತೂರಿನ** ಶಾಸನವೊಂದರಲ್ಲಿ ದೇವರಿಗೆ ಸಂಬಂಧಿಸಿದ ಜಮೀನೊಂದರ ಒಡೆತನವನ್ನು ಕುರಿತ ಇಬ್ಬರು ಪುರೋಹಿತರ ನಡುವಣ ವಿವಾದ 'ದಿವ್ಯ' ನಿರ್ಮಾಣಗೊಂಡುದರ ಸ್ವಾರಸ್ಯ ಪೂರ್ಣ ದಾಖಲೆಯಿದೆ. **ಶ್ರವಣಬೆಳಗೋಳ** ಶಾಸನದಲ್ಲಿ ವಿಜಯನಗರ ಬುಕ್ಕರಾಯನು ಅಲ್ಲಿನ ಮತೀಯ ವಿವಾದದ ತೀರ್ಮಾನದಲ್ಲಿ ಶ್ರವಣಬೆಳಗೋಳದ ಜೈನರಿಗೂ ಮತ್ತು ವೈಷ್ಣವರಿಗೂ ರಾಜಿ ಮಾಡಿಸಿದ್ದನ್ನು ನಿರೂಪಿಸುತ್ತವೆ. **ಸಾತರಣಿ ಸಣಿಯ** ನಾನಾಘಾಟ್ ಶಾಸನ ಇದರಲ್ಲಿ ರಾಣಿ ನಾಯನಿಕೆ ಮಾಡಿದ ಮಹಾಯಾಗಗಳಿಗೂ ಅವಳಿತ್ತ ಅಪಾರ ಯಾಗದ ದಕ್ಷಿಣೆಗಳ ಕುರಿತು ತಿಳಿಸುತ್ತದೆ. **ಮಂದಸೋರ್** ಶಾಸನದಲ್ಲಿ ದೇವಾಲಯವೊಂದರ ಜೀರ್ಣೋದ್ದಾರ ಹಾಗೂ ಪ್ರಾಚೀನ ಗುಪ್ತರಾಜರಲ್ಲೊಬ್ಬರ ಕಾಲವನ್ನು ತಿಳಿಸುತ್ತದೆ. **ವಿರಂಚಿಪುರದ** ಶಾಸನವೊಂದರಲ್ಲಿ ಪರೈವೀಡುನಾಡಿನ ಬ್ರಾಹ್ಮಣ ಕುಲಗಳಲ್ಲಿ ಮದುವೆಗಳು 'ಕನ್ಯಾದಾನ'ದಲ್ಲಿ ಮಾತ್ರ ಪರ್ಯಾವಸನಗೊಳ್ಳಬೇಕೆಂದು, ಹಣವನ್ನು ಸ್ವೀಕರಿಸುವ ಪಿತ್ರುವಾಗಲಿ, ವಧುವಿಗಾಗಿ ಹಣತೆರುವ ವರನಾಗಲೀ ದೊರೆಯ ಶಿಕ್ಷೆಗೆ ಗುರಿಯಾಗಿ ಜಾತಿಯಿಂದ ಬಹಿಷ್ಕೃತನಾಗಬೇಕೆಂದು ವಿವಾಹಶಾಸನವನ್ನು ಗೊತ್ತು ಮಾಡುವ ವಿಷಯ ಶಾಸನದಲ್ಲಿ ದಾಖಲೆಯಾಗಿದೆ.

3. **ಧಾರ್ಮಿಕ ದತ್ತಿ ವಿಷಯಕ್ಕೆ ಸಂಬಂಧಿಸಿದ ಶಾಸನಗಳು :** ಪ್ರಾಚೀನ ಕಾಲದಲ್ಲಿ ದೇವಾಲಯಗಳ ಅರ್ಚಕರಿಗೆ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ದಾನಗಳನ್ನು, ದತ್ತಿಗಳನ್ನು ನೀಡಿದಾಗ ಆ ವಿಷಯಗಳನ್ನೊಳಗೊಂಡ ಶಾಸನಗಳನ್ನು ಕೆತ್ತಿಸಲಾಗುತ್ತಿತ್ತು. ಇದಕ್ಕೆ ಸಂಬಂಧಪಟ್ಟಂತೆ ಅನೇಕ ಶಾಸನಗಳನ್ನು ಕಾಣಬಹುದು. ಅವುಗಳಲ್ಲಿ ಮುಖ್ಯವಾಗಿ **ಕ್ರಿ.ಶ.120 ನಾಸಿಕ್** ಶಾಸನ ಇದರಲ್ಲಿ ಭೌದ್ಧ ಸಂಘವೊಂದಕ್ಕೆ ಧನ ಮತ್ತು ತೆಂಗಿನ ತೋಟದ ಸಮರ್ಪಣೆ ದಾಖಲೆಯಿದೆ. **ಕ್ರಿ.ಶ.446ರ** ಸ್ಕಂದಗುಪ್ತನ ಕಾಲದ **ಇಂದೂರು** ಶಾಸನ ಇದರಲ್ಲಿ ಸೂರ್ಯದೇವಾಲಯವೊಂದಕ್ಕೆ ದೀಪದೆಣ್ಣೆಗಾಗಿ ದತ್ತಿಕೊಟ್ಟಿದ್ದನ್ನು ದಾಖಲಿಸಲಾಗಿದೆ. **ಕಲಚುಂಬರ್ರು** ಶಾಸನ ಪೂರ್ವಚಾಲುಕ್ಯ ದೊರೆ ಎರಡನೇ ಅಮ್ಮನು ಆ ಗ್ರಾಮವನ್ನು ಜೈನಗುರು ಒಬ್ಬನಿಗೆ ಜಿನದೇವಾಲಯದ ಬೋಜನಾ ಮಂದಿರದ ನಿರ್ವಹಣೆಗಾಗಿ ದಾನವಿತ್ತನೆಂದು ತಿಳಿಸುತ್ತದೆ. **ಅಬ್ಬಲೂರು** ಶಾಸನ 12ನೇ ಶತಮಾನದಲ್ಲಿ

ಶೈವಧರ್ಮ ನವಚೈತನ್ಯದಿಂದ ಸ್ಥಳಿಯವಾಗಿ ಬೆಳೆಯುವುದಕ್ಕೆ ಕಾರಣವಾದ ಚಳುವಳಿಯ ನಿಜವಾದ ಮೂಲಪುರುಷನನ್ನು ಈ ಶಾಸನ ತೋರಿಸಿಕೊಡುತ್ತದೆ. ಹೀಗೆ ಬನವಾಸಿಯ ಪ್ರಾಚೀನ ಕದಂಬರ ಕೆಲವು ಶಾಸನಗಳು, ಮದ್ಯಯುಗದಲ್ಲಿ ವಿಜಯನಗರ ಅರಸರ ಶಾಸನಗಳು, ಚಾಲುಕ್ಯರ ಕಾಲದ ಶಾಸನಗಳು ಧಾರ್ಮಿಕ ಮತ್ತು ದತ್ತಿವಿಷಯಗಳ ಕುರಿತು ತಿಳಿಸಿಕೊಡುವಲ್ಲಿ ಪ್ರಮುಖವಾದವುಗಳಾಗಿವೆ.

4. **ಲೌಖಿಕ ದಾನಗಳ ವಿಷಯಗಳನ್ನೊಳಗೊಂಡ ಶಾಸನಗಳು** : ಧರ್ಮಕ್ಕೆ ಯಾವ ರೀತಿಯಿಂದಲೂ ಸಂಬಂಧಿಸದ ಖಾಸಗಿ ವ್ಯಕ್ತಿಗಳಿಗೆ ನೀಡಿದ ಲೌಖಿಕ ದಾನಗಳನ್ನು ತಿಳಿಸುವ ದಾನಗಳು ಪ್ರಮುಖವಾಗಿವೆ.

- **ಹಲಸಿ ದಾಖಲೆ** : ಕದಂಬ ದೊರೆ ಕಾಕುಸ್ಥವರ್ಮನು ಶ್ರುತ ಕೀರ್ತಿಯೆಂಬ ಸೇನಾಧಿಪತಿಗೆ ತನ್ನ ಪ್ರಾಣ ಉಳಿಸಿದಕ್ಕಾಗಿ ಬಹುಮಾನವೆಂದು ಬೂದಾನವನ್ನು ಮಾಡಿದ್ದನ್ನು ತಿಳಿಸುತ್ತದೆ.
- **ಕ್ರಿ.ಶ. 754ರ ಪಟ್ಟದ ಕಲ್ಲು ಸ್ಥಂಭ ಶಾಸನ** : ಇದು ನಾಗರೀ ಮತ್ತು ಸ್ಥಳಿಯ ಲಿಪಿಗಳಲ್ಲಿ ಕೆತ್ತಲಾಗಿದ್ದು ಇದರಲ್ಲಿ ಗ್ರಾಮಾರ್ಧವನ್ನು ಧಾರ್ಮಿಕ ಉದ್ದೇಶಗಳಿಗಾಗಿ ದಾನ ನೀಡಿದ ವಿವರಣೆ ಇದೆ.
- **ಕ್ರಿ.ಶ.840ರ ದೊಡ್ಡ ಹುಂಡಿ ಶಾಸನ** : ಪಶ್ಚಿಮ ಗಂಗದೊರೆ ನೀತಿಮಾರ್ಗ ರಣವಿಕ್ರಮನ ಮರಣವನ್ನು ತಿಳಿಸುವುದಲ್ಲದೇ ಆ ರಾಜನ ಅನುಯಾಯಿಗೆ ಯಾವುದೇ ಭೂಮಿಯ ದಾನವಾಗಿ ನಿಡಿದ್ದರ ಕುರಿತು ತಿಳಿಸುತ್ತದೆ.
- **ಕ್ರಿ.ಶ.866ರ ನೀಲಗುಂದ್ ಶಾಸನ** : ರಾಷ್ಟ್ರಕೂಟ ದೊರೆ 1ನೇ ಅಮೋಘವರ್ಷ ಬೆಣ್ಣೆಯ ಅಥವಾ ತುಪ್ಪದ ಮೇಲಿ ತೆರಿಗೆ ಗ್ರಾಮದ ಮಹಾಜನರಿಗೆ ಸಲ್ಲಬೇಕೆಂದು ಆಜ್ಞೆ ಹೊರಡಿಸಿದ್ದನ್ನು ದಾಖಲಿಸುತ್ತದೆ.

ಈ ವರ್ಗದ ಅನೇಕ ದಾಖಲೆಗಳಿಗೆ ಮೈಸೂರಿನ, ವಿಜಯನಗರ ಸಾಮ್ರಾಜ್ಯದ, ವೈಸಳರ, ಚಾಲುಕ್ಯರ ಕಾಲದ, ಬಹುಪಾಲು ವೀರಗಲ್ಲುಗಳು, ವೀರರ ಮರಣಗಳನ್ನು ಸ್ಮರಿಸುವುದರ ಜೊತೆಗೆ ಭೂಮಿಗಳನ್ನು ದಾನ ಮಾಡುತ್ತಿದ್ದ ವಿಚಾರಗಳನ್ನು ತಿಳಿಸುತ್ತವೆ. ಕೊನೆಯದಾಗಿ ಕ್ರಿ.ಶ.949–50ರ ಅತಕೂರು ಶಿಲೆಯ ಮೇಲಿನ ಪೂರಕ ಶಾಸನದ ದ್ವಿತಿಯ

ವಾಕ್ಯ ಕಾಳಗದಲ್ಲಿ ಹೋರಿ ಉಳಿದ ವೀರನೊಬ್ಬನಿಗೆ ಶೌರ್ಯ ಜ್ಞಾಪಕವಾಗಿ ಗ್ರಾಮಗಳನು ಕೊಟ್ಟುದರ ಇನ್ನೊಂದು ನಿರ್ದಶನವನ್ನೊದಗಿಸುತ್ತದೆ.

**5. ಶಾಸನಗಳ ಚಾರಿತ್ರಿಕ ಮಹತ್ವಕ್ಕೆ ಕಾರಣಗಳು :**

- ಭಾರತದ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ದಾಖಲೆಗಳು ಅಲ್ಪಸಂಖ್ಯಾತವು ಅಲ್ಲ, ದೇಶದ ಯಾವುದೇ ಸಂಕುಚಿತ ವಿಭಾಗಗಳಿಗೆ ಸೀಮಿತವು ಅಲ್ಲ ಎಂಬುದು ಮಹತ್ವದ್ದಾಗಿದೆ.
- ಶಾಸನಗಳಲ್ಲಿ ಕಂಡುಬರುವ ಕಾಲಮಾನಗಳ ಸೂಚಿಯಿಂದಾಗಿ ಭಾರತದ ಅನೇಕ ರಾಜವಂಶಗಳ ವಂಶಾವಳಿ ಮತ್ತು ಕಾಲಗಣನೆಗೆ ಸಹಾಯಕಾರಿಯಾಗಿವೆ.
- ಶಾಸನಗಳು ಕೇವಲ ಕಾಲಗಣನೆ ಮತ್ತು ವಂಶಾವಳಿಯ ಕುರಿತು ತಿಳಿಸದೆ ರಾಜರ ಯುದ್ಧ, ಸಾಧನೆ ಮತ್ತು ಚರಿತ್ರಾರ್ಹ ಘಟನೆಗಳ ಕುರಿತು ವಿವರಿಸುತ್ತವೆ.
- ಶಾಸನಗಳ ಆಯಾ ಕಾಲಕ್ಕೆ ಸಂಬಂಧಿಸಿದ ಸಾಮ್ರಾಜ್ಯದ ಮತ್ತು ರಾಜ್ಯಗಳ ಗಡಿಗಳ ತಿಳಿಸುವ ಮೂಲಕ ಆಯಾ ಸಾಮ್ರಾಜ್ಯ ಮತ್ತು ರಾಜ್ಯಗಳ ವ್ಯಾಪ್ತಿಗಳನ್ನು ತಿಳಿಸುತ್ತವೆ.
- ಶಾಸನಗಳು ಸ್ಥಳ ಮತ್ತು ಘಟನೆಗೆ ಸಂಬಂಧಿಸಿದ ವಿವರಗಳನ್ನು ನಿಖರವಾಗಿ ತಿಳಿಸುವುದರಿಂದ ಅವುಗಳ ಸಂಬಂಧವನ್ನು ತಿಳಿಯಬಹುದು.
- ಚಾರಿತ್ರಿಕ ದೃಷ್ಟಿಯಿಂದ ಶಾಸನಗಳ ಅತಿಶಯ ಮೌಲ್ಯಕ್ಕೋಸುಗ ನಾವು ಋಣಿಯಾಗಿರಬೇಕಾಗಿದೆ.
- ಕ್ರಿ.ಪೂ.1ನೇ ಶತಮಾದಿಂದಲೂ ಶಾಸನ ದಾಖಲೆಗಳು ಬಹುಮಟ್ಟಿಗೆ ಕಾಲ ನಿರ್ದೇಶನವನ್ನೊಳಗೊಂಡಿವೆ. ಕ್ರಿ.ಪೂ.58ರಲ್ಲಿ ಖಾನಿಷ್ಕ ಸ್ಥಾಪಿಸಿದ ವಿಕ್ರಮಶಕ ಮೊದಲಾದ ವಿವಿಧ ಚಾರಿತ್ರಿಕ ಶಕಗಳಲ್ಲಿ ವರ್ಷದ ಉಲ್ಲೇಖದೊಡನೆ ಸಾಮಾನ್ಯವಾಗಿ ಮಾಸ, ದಿನ, ಮುಂತಾದವುಗಳ ವಿವರಣೆ ಇರುತ್ತವೆ. ಇದರಿಂದ ಯಾವುದೇ ನಿರ್ಧಿಷ್ಟ ದಾಖಲೆ ರೂಪುಗೊಂಡ ನಿಶ್ಚಿತ ಸಂದರ್ಭದ ಗಂಟೆಯನ್ನೂ ಕೂಡ ಹೇಳುವುದು ಸಾಧ್ಯವಾಗುತ್ತದೆ.
- ಭಾರತದಲ್ಲಿ ಶಾಸನಗಳು ನಂಬಿಕಾರ್ಹ ಆಧಾರಗಳಾಗಿವೆ. ಏಕೆಂದರೆ ಶಾಸನಗಳು ಶಿಲೆ ಮತ್ತು ಲೋಹಗಳ ಮೇಲೆ ಕೆತ್ತಲ್ಪಟ್ಟಿರುವುದರಿಂದ ಇವುಗಳಲ್ಲಿನ ವಿಷಯಗಳನ್ನು

ಸಾಹಿತ್ಯ ಕೃತಿಯಲ್ಲಿಯಂತೆ ಬದಲಾಯಿಸಲು ಸುಲಭಸಾಧ್ಯವಿಲ್ಲ. ಆದ್ದರಿಂದಲೇ ವಿ.ಎಸ್.ಸ್ಮಿತ್ ರವರು, ಭಾರತೀಯ ಶಾಸನಗಳನ್ನು ನಂಬಲರ್ಹವಾದ ಮಾಹಿತಿಗಳು ಎಂದಿದ್ದಾರೆ.

- ಭಾರತದ ಶಾಸನಗಳಿಂದ ಅನೇಕ ಭಾಷೆಗಳ ಹುಟ್ಟು ಬೆಳವಣಿಗೆ ಮತ್ತು ಅವುಗಳ ವಿಸ್ತಾರ ಕುರಿತು ತಿಳಿದುಬರುತ್ತದೆ. ಕಾರಣ ಶಾಸನಗಳ ಭಾಷೆಯ ಆಧಾರದ ಮೇಲೆ ಗುಪ್ತರ ಪೂರ್ವಯುಗವು ಪ್ರಾಕೃತವೆಂದು, ಗುಪ್ತಾನಂತರದ ಕಾಲವು ಸಂಸ್ಕೃತ ಬೆಳವಣಿಗೆಯ ಕಾಲವೆಂಬುದಾಗಿ ತಿಳಿಯಬಹುದು.
- ಭಾರತದ ಅನೇಕ ಸಾಹಿತ್ಯ ಕೃತಿಗಳ ಅಸಂಬಂದ್ದವಾದ ಹಾಗೂ ಉತ್ಪ್ರೇಕ್ಷೆಯಿಂದ ಕೂಡಿವೆ ಆದರೆ ಶಾಸನಗಳು ಬಹುತೇಕ ಇಂತಹ ದೋಷಗಳಿಂದ ಮುಕ್ತವಾಗಿರುತ್ತವೆ.

**ಉಪಸಂಹಾರ :**

ಬಹುಮಟ್ಟಿಗೆ ಶಾಸನಗಳಲ್ಲಿನ ವಿಷಯದ ಶೋಧನೆಗೆ ಮತ್ತು ಅವುಗಳ ಮಹತ್ವ ತಿಳಿದುಕೊಳ್ಳುವುದಕ್ಕೆ ಬುದ್ಧಿವಂತಿಕೆ, ತಾಳ್ಮೆ ಹಾಗೂ ತಕ್ಕ ಮಟ್ಟಿಗೆ ಅನುಭವವಲ್ಲದೇ ಮತ್ತೇನು ಬೇಕಿಲ್ಲ. ಶಾಸನಗಳ ಸಂಶೋಧನೆಯಲ್ಲಿ ನಾವು ಪಕ್ಷಭೇದವಿಲ್ಲದೆ ಕೆಲಸ ಮಾಡಬೇಕಾಗಿದೆ. ಭಾರತದಲ್ಲಿ ನಿಜವಾದ ಶಾಸನಗಳ ಜೊತೆ ಕೂಟ ಶಾಸನಗಳು ಇವೆ. ಈ ಕೂಟ ಶಾಸನಗಳನ್ನು ಸ್ವೀಕರಿಸುವುದರಿಂದ ಇತಿಹಾಸ ಬಹುದೋಷಪೂರ್ಣ ಸಾಮಾಗ್ರಿಹೊಂದಿದೆ ಎಂದು ಹೇಳಬಹುದು. ಕಾರಣ ಇತಿಹಾಸದಲ್ಲಿ ಇಂತಹ ದೋಷಪೂರ್ಣವಾದ ಸಾಮಗ್ರಿ ಸೇರದಂತೆ ತಡೆಯುವುದಕ್ಕಾಗಿ ನಾವು ವಿಶೇಷ ಎಚ್ಚರಿಕೆಯಿಂದ ಇರಬೇಕು. ಭಾರತದ ಶಾಸನಗಳಲ್ಲಿನ ರಾಜಕೀಯ ಚರಿತ್ರೆಯ ವಲಯದಲ್ಲಿ ಬಹಳ ಕೆಲಸ ಈಗಾಗಲೇ ನಡೆದಿದೆ. ಆದರೆ ಇತರ ವಿಷಯಗಳಲ್ಲಿ ಸಾಕಷ್ಟು ಸಂಶೋಧನೆಗಳು ನಡೆಯಬೇಕಾಗಿದೆ. ನಮಗೆ ಭಾರತದ ಇತಿಹಾಸ ಕುರಿತು ಪ್ರಮುಖ ಪಾತ್ರವಹಿಸಿರುವ ಶಿಲಾಶಾಸನಗಳಿಗೆ ಪ್ರತಿಯೊಬ್ಬ ಇತಿಹಾಸ ಪ್ರಜ್ಞೆ ಹೊಂದಿದ ವ್ಯಕ್ತಿ ಋಣಿಯಾಗಿರಬೇಕೆಂದು ನನ್ನ ಹಾರೈಕೆ.

**ಉಲ್ಲೆಖ ಗ್ರಂಥಗಳು :**


1) ಮೂಲ ಜೆ.ಎಫ್.ಫ್ಲೀಟ್, ಅನುವಾದ ಸಿ.ಪಿ.ಕೆ

2) ಇಂಡಿಯನ್ ಆಂಟಿಕ್‌ವೇರಿ ಜನವರಿ 1901,

**3)** ರೈಸರ ಕರ್ನಾಟಕ ಶಬ್ದಾನು ಶಾಸನಂ.

**4)** ಆನಿವಲ್ ರಿಪೋರ್ಟ್ ಆಪ್‌ದ ಆರ್ಕಿಯೋಲಾಜಿಕಲ್ ಸರ್ವೆ ಆಫ್ ಇಂಡಿಯಾ 1902.